ಮ್ಯಾಂಟಿಸ್ ಥರಾ ಇರ್ತದೆ. ಮುಟ್ಟಿದರೆ ಠಣ್ಣನೆ ಜಿಗೀತದಲ್ಲ ಅದು. ಇಂಗ್ಲಿಷಿನಲ್ಲಿ ಲೋಕಸ್ಟ್ ಅಂತಾರೆ. ಆಫ್ರಿಕಾದ ಹುಲ್ಲುಗಾವಲಿನಲ್ಲಿ ಚೆನ್ನಾಗಿ ಮೇವು ಸಿಕ್ರೆ ಅವು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸಂತಾನವೃದ್ಧಿ ಮಾಡ್ಕೋತವೆ. ಸುತ್ತಮುತ್ತ ಇದ್ದಬದ್ದ ಎಲ್ಲ ಹಸುರು ಹುಲ್ಲು, ಎಲೆ ಚಿಗುರು ಎಲ್ಲಾ ತಿಂತಾ ತಿಂತಾ ಕೋಟಿಗಟ್ಟಲೆ ಸಂಖ್ಯೆಯಲಿ ಹೆಚ್ಚಾಗ್ತವೆ. ಒಂದೆರಡು ವಾರಗಳಲ್ಲಿ ಅದೆಷ್ಟೊ ಕೋಟಿ ಮಿಡತೆ ಕೀಟಗಳು ಹುಲ್ಲಿನ ಬೆಟ್ಟ, ಹಸುರು ಬೇಣ, ಹೊಲ, ತೋಟ ಎಲ್ಲ ಕಡೆ ದಾಳಿ ಮಾಡ್ತಾ ಎಲ್ಲ ಹಸುರನ್ನೂ ಮುಗಿಸ್ತಾ ಇಡೀ ಇಡೀ ರಾಜ್ಯಗಳನ್ನೇ ರಾಷ್ಟ್ರಗಳನ್ನೇ ಬೋಳು ಮಾಡಿ ಬಿಡ್ತವೆ. ಈ ಮಿಡತೆ ದಾಳಿ ಅಂದ್ರೆ ಒಂಥರಾ ಕಾಡಿನ ಬೆಂಕಿ ಥರಾ. ಅವು ದಾಳಿ ಮಾಡಿದ್ರೆ ಬರಗಾಲನೇ ಬಂದ ಹಾಗೆ.

ಅವಳು: ಗಾಂಧೀಜಿ ಅದರ ಬಗ್ಗೆ ಯಾಕೆ ಹೇಳಿದ್ರು?

ಅವನು: 'ಹಾಸಿಗೆ ಇದ್ದಷ್ಟೇ ಕಾಲು ಚಾಚು', 'ಅತಿಯಾದ ಭೋಗ ಜೀವನ ಬೇಡ' ಎಂತ ಗಾಂಧೀಜಿ ಯಾವಾಗ್ಲೂ ಹೇಳ್ತಾ ಇದ್ದರು ತಾನೆ? ಅದೇ ರೀತಿ ಅವರೂ ಬದುಕಿದರು ತಾನೆ? ಹಾಗೆ ನೋಡಿದರೆ ಗಾಂಧೀಜಿ ತುಂಬ ದೊಡ್ಡ ಶ್ರೀಮಂತ ಕುಟುಂಬದಿಂದ ಬಂದವರು. ಆಗಿನ ಕಾಲದಲ್ಲೇ ಇಂಗ್ಲೆಂಡಿಗೆ ಹೋಗಿ 'ಬಾರ್ ಅಟ್ ಲಾ' ಡಿಗ್ರಿ ಮಾಡಿ ಬಂದವರು ಬೇರೆ. ಅವರು ಮನಸ್ಸು ಮಾಡಿದರೆ ದಿನಕ್ಕೆ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಬಹುದಿತ್ತು. ಆದರೆ, ಎಲ್ಲ ವೈಭೋಗವನ್ನೂ ತ್ಯಾಗ ಮಾಡಿದರು. 'ಅರೆಬಟ್ಟೆ ಫಕೀರ' ಎಂತಲೇ ಬ್ರಿಟಿಷರು ಅವರನ್ನು ಹಂಗಿಸಿದರು. ಮುಂದೆ, ಯಾರೋ ಒಬ್ರು ಗಾಂಧೀಜಿನ ಕೇಳಿದರು: ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೆ 'ನಾವೂ ಬ್ರಿಟಿಷರ ಥರಾ ಐಷಾರಾಮಿ ಜೀವನ ಮಾಡಬಹುದಲ್ಲ?' ಎಂದು. ಅವರ ಉತ್ತರ ಏನಿತ್ತು ಗೊತ್ತೆ?

ಮಗು: ಏನಂದ್ರು ಗಾಂಧೀತಾತ?

ಅವನು: ಬ್ರಿಟನ್ನಿನಂಥ ಪುಟ್ಟ ರಾಷ್ಟ್ರದ ಐಷಾರಾಮಿ ಜೀವನಕ್ಕೆ ಎಷ್ಟೊಂದು ದೇಶಗಳಿಂದ ಸಂಪತ್ತು ಹರಿದು ಬರ್ತಾ ಇದೆ. ಇನ್ನು 33 ಕೋಟಿ ಜನಸಂಖ್ಯೆ ಇರುವ ಈ ನಮ್ಮ ಭಾರತ ದೇಶವೂ ಅಷ್ಟೇ ಭೋಗಜೀವನ ನಡೆಸಿದರೆ ಇಡೀ ಭೂಮಿಯ ಸಂಪತ್ತು ನಮಗೇ ಬೇಕಾಗ್ತದೆ. 'ಮಿಡತೆ ದಾಳಿಗೆ ಸಿಕ್ಕ ಪೈರಿನ ಹಾಗೆ ಇಡೀ ಜಗತ್ತಿನ ಎಲ್ಲ ಸಂಪತ್ತೂ ಬರಿದಾಗುತ್ತದೆ' ಎಂದರು.

(ಬರಗಾಲದ, ಬಿಸಿಗಾಳಿಯ, ಮರಳು ದಿಬ್ಬಗಳು ಊಳಿಡುವ ಸದ್ದು, ಕಾಡಿನ ಬೆಂಕಿಯ ಲಟಪಟ ಸದ್ದು, ಲಾರಿ ಜಲ್ಲಿಕಲ್ಲನ್ನು ಸುರಿಯುವ ಸದ್ದು)

ಅವಳು: ನಮ್ಮ ದೇಶದ್ದೇ ಎಷ್ಟೊಂದು ಅರಣ್ಯಗಳು ನಾಶ ಆಗಿವೆ; ಬರಗಾಲ ಬರ್ತಾ ಇದೆ. ಹುಲಿ, ಆನೆ, ಜಿಂಕೆ, ಕರಡಿ, ರಣಹದ್ದು, ಮನೆಗುಬ್ಬಿ ಹೀಗೆ ಮೃಗಪಕ್ಷಿಗಳ ಸಂಖ್ಯೆ ಕಮ್ಮಿ ಆಗಿದೆ. ಖನಿಜದ ಬೆಟ್ಟಗಳು ಖಾಲಿ ಆಗಿವೆ. ಕೆರೆ – ನದಿಗಳು ಕೊಳಕಾಗಿವೆ. ಆದರೆ, ನಮ್ಮ ದೇಶದ ಕಾಲುಭಾಗದ ಜನರೂ ಬ್ರಿಟಿಷ್ ಮಾದರಿಯ ವೈಭೋಗ ನಡೆಸ್ತಾ ಇಲ್ಲ. ಹಳ್ಳಿಗಳಲ್ಲಂತೂ ಗಾಂಧೀಜಿಯನ್ನು ಹೋಲುವ ಲಂಗೋಟಿ ಫಕೀರರೇ ಕಾಣ್ತಾರೆ. ಆದರೂ ಅವರು ಹೇಳಿದ ಹಾಗೆ ನಮ್ಮ ರಾಜ್ಯಕ್ಕೂ ಮಿಡತೆ ದಾಳಿ ಆದಂತೆ ಕಾಣ್ತಾ ಇದೆ ಅಲ್ವಾ?